**ಸಾಕ್ಷಿಗೆ ದಿನಾಂಕಃ 12.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಪೊಲೀಸರು ನನಗೆ ತೋರಿಸಿದ ಮತ್ತು ಈ ಪ್ರಕರಣದ ಆರೋಪಿ ಶಶಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವನನ್ನು ನೋಡಿ ಗುರುತಿಸುತ್ತಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು.ಎಂ.ಹೆಚ್ ವಕೀಲರಿಂದಃ**

1. ಆರೋಪಿ ಅಗರದಳ್ಳಿ ಯಲ್ಲಿ ವಾಸವಿದ್ದಾನೆ. ನಮ್ಮ ಮನೆಯಲ್ಲಿ ಕಳ್ಳತನವಾಗುವ 3–4 ತಿಂಗಳ ಹಿಂದಿನಿಂದ ಆರೋಪಿ ನಮ್ಮ ಊರಿಗೆ ಕೆಲಸಕ್ಕೆ ಬರುತ್ತಿದ್ದ, ಹಾಗಾಗಿ ನಾನು ಅವನನ್ನು ನೋಡಿದ್ದೆ. ಆರೋಪಿ, ಆತನ ಹೆಂಡತಿ ಮತ್ತು ನಾನು ಒಂದೇ ಕಡೆ ಅಡಿಕೆ ಸುಲಿಯುವ ಕೆಲಸ ಮಾಡುತ್ತಿದ್ದೇವು. ಸಾಕ್ಷಿ ಸ್ವ ಇಚ್ಚೆಯಿಂದ ಆರೋಪಿ ತನ್ನ ಮಗುವನ್ನು ತಾನು ಕೆಲಸ ಮಾಡುವ ಜಾಗಕ್ಕೆ ಕರೆದುಕೊಂಡು ಬರುತ್ತಿದ್ದ ಎನ್ನುತ್ತಾರೆ. ನಾವು ಶಿವಣ್ಣ ಎಂಬುವವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೆವು. ಸದರಿಯವರ ಮನೆಯಿಂದ ನಮ್ಮ ಮನೆ ಸುಮಾರು 300 ಅಡಿ ದೂರದಲ್ಲಿದೆ. ನಾನು ಮನೆಯ ಹತ್ತಿರದಲ್ಲೇ ಕೆಲಸ ಮಾಡುವುದರಿಂದ ಸಾಮಾನ್ಯವಾಗಿ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಮನೆಯ ಬೀಗ ಹಾಕುತ್ತಿರಲಿಲ್ಲ.

2. ಆರೋಪಿ ತನ್ನ ಮಗುವಿಗೆ ಕೊಡಲು ಪ್ರತಿ ದಿನ ನನ್ನ ಮನೆಗೆ ಬಂದು ಹಾಲು ತೆಗೆದುಕೊಂಡು ಹೋಗುತ್ತಿದ್ದ. ಆರೋಪಿ ಜೊತೆ ಆತನ ಹೆಂಡತಿ ಸಹ ಬರುತ್ತಿದ್ದಳು.

3. ಪೊಲೀಸರು ನಿಮಗೆ ಆರೋಪಿ ಶಶಿ ಒಬ್ಬರನ್ನೇ ತೋರಿಸಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಮತ್ತೊಬ್ಬ ವ್ಯಕ್ತಿಯನ್ನು ತೋರಿಸಿದ್ದರು, ಆತನ ಹೆಸರು ರಾಜು ಇರಬಹುದು ಎನ್ನುತ್ತಾರೆ. ಸದರಿ ರಾಜುನನ್ನು ಆರೋಪಿ ಜೊತೆ ಕಳ್ಳತನ ಆದ ದಿನ ನೋಡಿದ್ದೆ. ಸಾಕ್ಷಿ ಸ್ವ ಇಚ್ಚೆಯಿಂದ ಸದರಿ ಇಬ್ಬರು ಆರೋಪಿತರು ಒಟ್ಟಿಗೆ ಕಳ್ಳತನ ಮಾಡಿದ್ದಾರೆ ಎಂದು ಸಿಸಿ ಟಿವಿ ನೋಡಿ ಪೊಲೀಸರು

ಹೇಳಿದರು ಎನ್ನುತ್ತಾರೆ. ಕಳ್ಳತನ ಆದ ದಿನ 1 ನೇ ಆರೋಪಿಯ ಜೊತೆ ರಾಜು ಎಂಬ ಮತ್ತೊಬ್ಬ ವ್ಯಕ್ತಿಯನ್ನು ಬೆಳಗ್ಗೆ 11-00 ಮತ್ತು ಮಧ್ಯಾಹ್ನ 12-30 ಗಂಟೆಗೆ ನೋಡಿದ್ದೆ.

4. ನನ್ನ ಮನೆಯಲ್ಲಿ ಕಳ್ಳತನವಾಗಿದೆ ಎಂದು ನನಗೆ ಮಧ್ಯಾಹ್ನ 12-30 ಗಂಟೆಗೆ ಗೊತ್ತಾಯಿತು. ಸದರಿ ವಿಷಯ ಗೊತ್ತಾದ ನಂತರ ಆರೋಪಿ ಶಶಿ ಅಥವಾ ಆತನ ಜೊತೆ ಇದ್ದ ರಾಜುನನ್ನು ನೋಡಿಲ್ಲ. ಅವರಿಬ್ಬರೇ ನನ್ನ ಮನೆಯಲ್ಲಿ ಕಳ್ಳತನ ಮಾಡಿದ್ದಾರೆ ಎಂದು ಅದೇ ದಿನ ಸಂಜೆ ವೇಳೆಗೆ ಸಂಶಯ ಬಂತು ಮತ್ತು ಅದನ್ನು ಪೊಲೀಸರಿಗೆ ಹೇಳಿದ್ದೆ. ಸದರಿ ವಿಷಯವನ್ನು ಪೊಲೀಸರಿಗೆ ನಾನು ಹೇಳಿದಾಗ ಸಮಯ ಸುಮಾರು 04-30 ಆಗಿತ್ತು. ನಾನು ಪೊಲೀಸರಿಗೆ ದೂರು ಕೊಟ್ಟಾಗ ಸಂಜೆ 06-00 ಗಂಟೆಯಾಗಿತ್ತು. ಈ ಪ್ರಕರಣದ ಆರೋಪಿತರ ಮೇಲೆ ನನಗೆ ಸಂಶಯ ಇದೆ ಎಂದು ದೂರಿನಲ್ಲಿ ಬರೆಸಿಲ್ಲ.

5. ಆರೋಪಿ ನನ್ನ ಮನೆಯ ಒಳಗೆ ಯಾವತ್ತು ಬಂದಿಲ್ಲ, ಮನೆಯ ಜಗಳಿಗೆ ಮಾತ್ರ ಬಂದು ಹೋಗಿದ್ದ ಎಂದರೆ ಸರಿ. ನನ್ನ ಮನೆಯಲ್ಲಿ ಏನೇನಿದೆ ಎಂಬ ಬಗ್ಗೆ ನಾನು ಆರೋಪಿ ಜೊತೆ ಚರ್ಚೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ನಾನು ಮತ್ತು ನನ್ನ ಮಗಳು ಹಬ್ಬದ ದಿನ ಒಡವೆ ಹಾಕಿಕೊಂಡು ಹೋಗಿದ್ದನ್ನು ಆರೋಪಿ ನೋಡಿದ್ದ ಎನ್ನುತ್ತಾರೆ.

6. ನನ್ನ ಮನೆಯಲ್ಲಿ 4 ಕೋಣೆ ಇದೆ. ನಮ್ಮ ಮನೆಯಲ್ಲಿ ಒಂದು ಅಲಮೇರಾ ಮಾತ್ರ ಇದೆ. ಸದರಿ ಅಲಮೇರಾದ ಬೀಗದ ಕೀ ಯನ್ನು ಒಂದು ಪರ್ಸ್ ನಲ್ಲಿಟ್ಟು, ಸದರಿ ಪರ್ಸ್ ನ್ನು ಅಲ್ಲೇ ಗೋಡೆಗೆ ನೇತು ಹಾಕಿದ್ದೇವು. ನಾನು ನೋಡಿದಾಗ ಅಲಮೇರಾ ಬೀಗ ತೆಗೆದು ಕಳ್ಳತನ ಮಾಡಿ ನಂತರ ಅಲಮೇರಾದ ಬಾಗಿಲು ಮತ್ತು ಬೀಗ ಹಾಕಿ ಕೀ ಯನ್ನು ಪರ್ಸ್ ನಲ್ಲೆ ಇಟ್ಟಿದ್ದರು. ಅಲಮೇರಾದ ಒಳಗೆ 4 ಕಪಾಟುಗಳಿದೆ. ಕಳ್ಳತನವಾಗಿದ್ದ ಒಡವೆಗಳನ್ನು ಒಂದು ಪರ್ಸ್ ನಲ್ಲಿ ಹಾಕಿ ಅದನ್ನು ವ್ಯಾನೇಟಿ ಬ್ಯಾಗ್ ನಲ್ಲಿ ಇಟ್ಟು ಬ್ಯಾಗ್ ನ್ನು ಕಪಾಟಿನಲ್ಲಿ ಇಟ್ಟಿದ್ದೆ. ಕಳ್ಳತನ ಆಗಿದೆ ಎಂದು ನಿಮಗೆ ಅನುಮಾನ ಯಾಕೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ಮನೆಯ ಹಿಂಬದಿಯ ಬಾಗಿಲು ತೆಗೆದು, ಮುಂಭಾಗದ ಬಾಗಿಲು ಚೀಲಕ ಹಾಕಿತ್ತು ಮತ್ತು ಅಲೇಮಾರದ ಒಳಗೆ ಇದ್ದ ಮೊಬೈಲ್ ಕವರ್ ಹೊರಗೆ ಬಿದಿದ್ದರಿಂದ ಸಂಶಯ ಬಂತು

ಎನ್ನುತ್ತಾರೆ. ಒಡವೆ ಮಾತ್ರ ಕಳ್ಳತನವಾಗಿದೆ ಎಂದು ನಿಮಗೆ ಯಾಕೆ ಅನುಮಾನ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ನಾನು ಬೀರು ತೆಗೆದು ನೋಡಿದಾಗ ಕಳ್ಳತನವಾಗಿತ್ತು ಎನ್ನುತ್ತಾರೆ.

7. ನಾನು ಮನೆಗೆ ಬಂದು ಬೀರು ತೆಗೆದು ನೋಡಿದಾಗ ನನ್ನ ಜೊತೆ ಕೆಲಸ ಮಾಡುತ್ತಿದ್ದವರೆಲ್ಲರೂ ಬಂದರು. ಬೀರು ಬಾಗಿಲು ತೆಗೆದಾಗ ಅದರ ಒಳಗೆ ಇದ್ದ ವಸ್ತುಗಳು ಚಲ್ಲಾ-ಪಿಲ್ಲಿಯಾಗಿರಲಿಲ್ಲ. ಬೀರುವಿನಲ್ಲಿ ಒಡವೆ ಇಟ್ಟಿರುವ ಬಗ್ಗೆ ನಿಮ್ಮನ್ನು ಹೊರತುಪಡಿಸಿ ಬೇರೆಯಾರಿಗೆ ಗೊತ್ತಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯ ಹೆಂಡತಿ ನಮ್ಮ ಮನೆ ಬಂದು ಫೋಟೋ ಅಲ್ಬಮ ನೋಡಿತ್ತಿದ್ದಳು ಹಾಗಾಗಿ ಅವಳಿಗೆ ಗೊತ್ತಿತ್ತು ಎನ್ನುತ್ತಾರೆ. ಆಕೆಯ ಹೆಸರು ಲಕ್ಷ್ಮಿ ಇರಬಹುದು. ಕಳ್ಳತನವಾದ ಒಡವೆಗಳ ಬಗ್ಗೆ ಲಕ್ಷ್ಮಿಗೆ ಮಾಹಿತಿ ಇತ್ತು ಎಂದು ಪೊಲೀಸರಿಗೆ ಹೇಳಿದ್ದೆ. ಆರೋಪಿಯ ಹೆಂಡತಿ ಲಕ್ಷ್ಮಿ ಆತನ ಜೊತೆ ಅಗರದಹಳ್ಳಿಯಲ್ಲಿ ವಾಸವಿರುತ್ತಾಳೆ. ಸದರಿ ಗ್ರಾಮ ನಮ್ಮ ಮನೆಯಿಂದ 5 ಕಿ.ಮೀ ದೂರಿದಲ್ಲಿದೆ. ಆರೋಪಿ ಪರಿಚಯವಾದಗಿನಿಂದಲೇ ನನಗೆ ಆತನ ಹೆಂಡತಿ ಪರಿಚಯವಾಯಿತು. ಘಟನೆ ನಡೆದಾಗ ಆರೋಪಿಯ ಮಗುವಿಗೆ 1 ವರ್ಷ 4 ತಿಂಗಳು ವಯಸ್ಸು ಆಗಿರಬಹುದು. ದೂರು ಕೊಡುವಾಗ ಲಕ್ಷ್ಮಿ ಮೇಲೆ ಗುಮಾನಿ ಇದೆ ಎಂದು ಬರೆಸಿಲ್ಲ.

8. ನಮ್ಮ ಮನೆಯ ಅಕ್ಕ-ಪಕ್ಕ ಬೇರೆ ಯಾವುದೇ ಮನೆ ಇಲ್ಲ. ಸಾಕ್ಷಿ ಪುನಃ ಮನೆಯ ಹಿಂಭಾಗದಲ್ಲಿ ಒಂದು ಬೇರೆ ಮನೆ ಇದೆ ಎನ್ನುತ್ತಾರೆ. ನಾನು ಕೆಲಸಕ್ಕೆ ಹೋಗಿದ್ದ ಶಿವಣ್ಣ ರವರ ಮನೆ ನಮ್ಮ ಮನೆಯ ಮುಂಭಾಗದಲ್ಲಿದೆ. ಅಡಿಕೆ ಸುಲಿಯುವ ಸಂದರ್ಭದಲ್ಲಿ ಅವರ ಮನೆಯಲ್ಲಿ ತುಂಬಾ ಜನ ಇರುತ್ತಾರೆ ಎಂದರೆ ಸರಿ. ಕೆಲಸಗಾರರಿಗೆ ಸಾಮಾನ್ಯವಾಗಿ ಪರಸ್ಪರ ಗುರುತು ಪರಿಚಯವಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಅನುಮಾನಸ್ಪದ ವ್ಯಕ್ತಿಗಳು ಕಂಡಾಗ ಅವರ ಬಗ್ಗೆ ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ರಾಜು ಎಂಬಾತ ಆರೋಪಿಯನ್ನು ನೋಡಲು ಬಂದಾಗ ನಾನು ಆತನ ಬಗ್ಗೆ ವಿಚಾರಣೆ ಮಾಡಲಿಲ್ಲ.

9. ನಾನು ಅಡಿಕೆ ಸುಲಿಯುತ್ತಿದ್ದ ಶಿವಣ್ಣ ಮತ್ತೊಬ್ಬ ಸಾಕ್ಷಿದಾರ ಚಾಸಾ-2 ರವರ ಮನೆಯಲ್ಲಿ ಸಿಸಿ ಕ್ಯಾಮಾರ ಇದೆ. ಸದರಿ ಸಿಸಿ ಟಿವಿಯಲ್ಲಿ ನಮ್ಮ ಮನೆಯ ದೃಶ್ಯಾವಳಿಗಳು ಸೆರೆಯಾಗುತ್ತವೆ.

ಪೊಲೀಸರು ಸದರಿ ಸಿಸಿ ಕ್ಯಾಮಾರವನ್ನು ವಶ ಪಡಿಸಿಕೊಂಡಿದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಸಿ ಟಿವಿಯಲ್ಲಿ ಆರೋಪಿಗಳ ಚಲನ-ವಲನ ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪೊಲೀಸರ ಒತ್ತಾಯದ ಮೇರೆಗೆ ಆರೋಪಿ ವಿರುದ್ಧ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಳ್ಳತನ ಮಾಡಿಲ್ಲ ಎಂದು ಗೊತ್ತಿದ್ದರಿಂದಲೇ ನಾನು ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಆತನ ಹೆಸರು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಪತ್ತೆಯಾಗದ ಕಾರಣ ನಮ್ಮ ಮನೆಯ ಕಳ್ಳತನ ಪ್ರಕರಣದಲ್ಲಿ 1 ನೇ ಆರೋಪಿಯನ್ನು ಪೊಲೀಸರು ವಿನಃ ಕಾರಣ ಸಿಲ್ಲುಕಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ಕಳ್ಳತನ ಆದ ದಿನದಿಂದಲೇ ಆರೋಪಿ ತಲೆ ಮರಿಸಿಕೊಂಡಿದ್ದ ಎನ್ನುತ್ತಾರೆ. ಆರೋಪಿ ತಪ್ಪು ಮಾಡದೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಪೊಲೀಸರು ಸೃಷ್ಟಿಮಾಡಿರುವ ನಿ.ಪಿ.-1 ಮತ್ತು 2 ರ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**
**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**